<u>ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು</u>

<u>ಪಾಟೀ ಸವಾಲುಃ- **Sri. I.H.** ವಕೀಲರಿಂದ ಆರೋಪಿಯ ಪರವಾಗಿ</u>

16. ನಿಪಿ-15ರಲ್ಲಿ ಕಂಡು ಬರುವ ಡಿಕ್ರಿ ಚಾರ್ಜಸ್ ಅಂದರೆ ಈ ಸಾಲಕ್ಕೆ ಸಂಬಂಧಪಟ್ಟಂತೆ ಆರೋಪಿಯ ವಿರುದ್ಧ RCS ನ್ಯಾಯಾಲಯದಲ್ಲಿ ಆಗಿರುವ ಪ್ರಕರಣದ ಡಿಕ್ರಿಯ ಖರ್ಚು ಎಂದು ಹೇಳುತ್ತಾರೆ. ಸದರಿ ಡಿಕ್ರಿ ಯಾವಾಗ ಆಗಿದೆ ಎಂದು ನನಗೆ ಸ್ಪಷ್ಟ ಮಾಹಿತಿ ಇರುವುದಿಲ್ಲ. ನಿಪಿ-15ರಲ್ಲಿರುವ ಉಲ್ಲೇಖವನ್ನು ನಾವೇ ಮಾಡಿರುತ್ತೇವೆ. ಡಿಕ್ರಿ ಚಾರ್ಜನ್ನು ಕೇಂದ್ರ ಕಛೇರಿಯಿಂದ ಕಡಿತಗೊಳಿಸಿರುತ್ತಾರೆ. ಆ ಬಗ್ಗೆ ನಿಪಿ-15ರಲ್ಲಿ ಉಲ್ಲೇಖ ಇರುವುದಿಲ್ಲ. ಎಷ್ಟು ಮೊತ್ತಕ್ಕೆ ಅಲ್ಲಿ ಡಿಕ್ರಿಯಾಗಿದೆ ಎಂದು ನನಗೆ ಮಾಹಿತಿ ಇರುವುದಿಲ್ಲ. ಡಿಕ್ರಿ ಮೊತ್ತವನ್ನು ಆರೋಪಿ ಪಾವತಿ ಮಾಡಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ. ನಿಪಿ-15ನ್ನು ನಾನು ನನ್ನ ವೈಯಕ್ತಿಕ ನೆಲೆಯಲ್ಲಿ ಸೃಷ್ಟಿಸಿ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ನಿಪಿ-14ರಲ್ಲಿ ನಿಪಿ-1ರ ದಿನಾಂಕಕ್ಕೆ ಅಷ್ಟು ಮೊತ್ತ ಬರಲು ಬಾಕಿ ಇತ್ತು ಎಂದು ಉಲ್ಲೇಖ ಇರುವುದಿಲ್ಲ. ನಿಪಿ-14 ಮತ್ತು 15ನ್ನು ನಾನು ನನ್ನ ವೈಯಕ್ತಿಕ ನೆಲೆಯಲ್ಲಿ ಈ ಕೇಸಿಗಾಗಿ ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ನಿಪಿ-1ರ ಮೊತ್ತವನ್ನು ಆರೋಪಿಯು ಪಾವತಿಸಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಿಸಲಾಯಿತು)**

ಓ.ಹೇ.ಕೇ. ಸರಿ. ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಬೆಳ್ತಂಗಡಿ